

# ‘ಪುಷ್ಪಕ’ ವಿಹಾರ

**ರಮೇಶ್ ಅರವಿಂದ್ ನಟನೆಯ ನೂರನೇ ಕನ್ನಡ ಸಿನಿಮಾ ‘ಪುಷ್ಪಕ ವಿಮಾನ’. ಹಿರಿಯ ನಟನೊಬ್ಬನ ನೂರನೇ ಚಿತ್ರವನ್ನು ಹೊಸ ನಿರ್ದೇಶಕನೊಬ್ಬ ರೂಪಿಸಿರುವುದು ‘ಪುಷ್ಪಕ’ದ ವಿಶೇಷ.**



ಕಮಲಹಾಸನ್ ಅಭಿನಯದ ‘ಪುಷ್ಪಕ ವಿಮಾನ’ ತೆರೆಕಂಡಿದ್ದು 1987ರಲ್ಲಿ. ಮಧ್ಯಮ ವರ್ಗದ ತರುಣನೊಬ್ಬ ಸಂದರ್ಭವನ್ನು ಬಳಸಿಕೊಂಡು, ಕೆಲವು ಸಮಯದ ಕಾಲ ಶ್ರೀಮಂತಿಕೆಯ ಜೀವನ ನಡೆಸುವ ಕಥೆಯ ಚಿತ್ರವದು. ಸಿಂಗೀತಂ ಶ್ರೀನಿವಾಸರಾವ್ ನಿರ್ದೇಶನದ ಆ ಸಿನಿಮಾ ತನ್ನ ನವಿರುಹಾಸ್ಯ–ನಿರೂಪಣೆಯ ಮೂಲಕ ಸಹೃದಯರ ಗಮನಸೆಳೆದಿತ್ತು. ಮಾತುಗಳೇ ಇಲ್ಲದ ಆ ಚಿತ್ರ ನೋಡುಗರ ಮನಸ್ಸನ್ನು ಕಲಕಿತ್ತು. ಆ ಜಾದೂ ನಡೆದು ಸುಮಾರು ಮೂರು ದಶಕಗಳ ನಂತರ, ಅದೇ ಹೆಸರಿನ ಮತ್ತೊಂದು ಸಿನಿಮಾ ಸುದ್ದಿಯಲ್ಲಿದೆ. ಇದು ರವೀಂದ್ರನಾಥ್ ನಿರ್ದೇಶನದ ಚಿತ್ರ.

2016ರ ‘ಪುಷ್ಪಕ ವಿಮಾನ’ದ ಬಹುದೊಡ್ಡ ವಿಶೇಷ, ರಮೇಶ್ ಅರವಿಂದ್ ನಟನೆಯ ನೂರನೇ ಕನ್ನಡ ಸಿನಿಮಾ ಇದೆನ್ನುವುದು. ‘ಸುಂದರ ಸ್ವಪ್ನಗಳು’ ಚಿತ್ರದ ರಮೇಶ್ ಈಗ ‘ಪುಷ್ಪಕ’ ವಿಹಾರದಲ್ಲಿದ್ದಾರೆ.

ಕಲಾವಿದನೊಬ್ಬನ ವೃತ್ತಿಜೀವನದಲ್ಲಿ ನೂರನೇ ಸಿನಿಮಾ ಎನ್ನುವುದು ಸಂಭ್ರಮದ ಸಂಗತಿ. ಸಾಮಾನ್ಯವಾಗಿ ನಾಯಕನಟರ ನೂರನೇ ಚಿತ್ರಗಳು ಅವರ ಇಮೇಜ್ ಅನ್ನು ವೈಭವೀಕರಿಸುವ ರೀತಿಯಲ್ಲಿರುತ್ತವೆ. ಆದರೆ, ರಮೇಶ್ ಅವರ ನೂರನೇ ಸಿನಿಮಾ ಅವರೊಳಗಿನ ಕಲಾವಿದನನ್ನು ಮತ್ತಷ್ಟು ಹೊಳಪುಗೊಳಿಸುವಂತಿದೆ. ಸಿಂಗೀತಂರ ‘ಪುಷ್ಪಕ’ ಕಮಲಹಾಸನ್‌ರ ಪ್ರತಿಭಾವಿಲಾಸವನ್ನು ಅನಾವರಣಗೊಳಿಸಿದರೆ, ಈ ಹೊತ್ತಿನ ‘ಪುಷ್ಪಕ’ ರಮೇಶ್ ಪ್ರತಿಭೆಯ ಮೂಲಕ ಕಂಗೊಳಿಸುತ್ತಿದೆ ಎಂದು ಚಿತ್ರತಂಡ ಹೇಳಿಕೊಳ್ಳುತ್ತಿದೆ.

ಕಳೆದ ವಾರವಷ್ಟೇ ಚಿತ್ರದ ಹಾಡುಗಳ ಧ್ವನಿಮುದ್ರಿಕೆ ಬಿಡುಗಡೆಗೊಂಡಿದೆ. ಆ ಕಾರ್ಯಕ್ರಮದಲ್ಲಿ ಮಾತನಾಡಿದ ‘ಝೀ’ ವಾಹಿನಿಯ ಬಿಜಿನೆಸ್ ಹೆಡ್ ರಾಘವೇಂದ್ರ ಹುಣಸೂರು – ರಮೇಶ್ ಅವರನ್ನು ಕಮಲಹಾಸನ್ ಅವರಿಗೆ ಹೋಲಿಸುವುದಕ್ಕೆ ತಮಗೆ ಯಾವುದೇ ಮುಜುಗರವಿಲ್ಲ ಎಂದು ಹೇಳಿದ್ದರು. ಅವರ ಪ್ರಕಾರ ‘ರಮೇಶ್ ಅರವಿಂದ ಕನ್ನಡದ ಕಮಲಹಾಸನ್’. ಹುಣಸೂರರ ಮಾತಿನಲ್ಲಿ ಅತಿಶಯೋಕ್ತಿಯೇನಿಲ್ಲ. ರಮೇಶ್ ಕೂಡ ಕಮಲ್ ಅವರಂತೆಯೇ ಬಹು ಆಸಕ್ತಿಗಳ ಕಲಾವಿದ. ಇಬ್ಬರೂ ಗೆಳೆಯರು. ಇಬ್ಬರಿಗೂ ಸಿನಿಮಾ ಕುರಿತ ವಿಪರೀತ ಹಸಿವು–ಆಸಕ್ತಿ ಹಾಗೂ ಕಲಿಕೆಯ ಕುರಿತಂತೆ ವಿದ್ಯಾರ್ಥಿಯ ವಿನಯ. ‘ನಿನ್ನೆಗಿಂತ ನಾಳೆಯ ಬಗ್ಗೆ ನನಗೆ ಹೆಚ್ಚು ಆಸಕ್ತಿ’ ಎನ್ನುವ ಮಾತು ರಮೇಶ್ ಅವರ ಕಲಿಕೆಯ ಹಂಬಲ ಹಾಗೂ ಜೀವನಪ್ರೀತಿಯನ್ನು ಸೂಚಿಸುವಂತಿದೆ.

‘ಪುಷ್ಪಕ ವಿಮಾನ’ ಚಿತ್ರದಲ್ಲಿ ರಮೇಶ್ ಓರ್ವ ಭಾವುಕ ತಂದೆಯ ಪಾತ್ರದಲ್ಲಿ ನಟಿಸಿದ್ದಾರಂತೆ. ಅಪ್ಪ ಹಾಗೂ ಪುಟಾಣಿ ಮಗಳ ನಡುವಣ ನಂಟಿನ ಭಾವೋತ್ಕರ್ಷದ ಕಥನ ಚಿತ್ರದಲ್ಲಿದೆ. ಪ್ರಯೋಗಶೀಲ ಕಮರ್ಷಿಯಲ್ ಚಿತ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ತೆರೆಕಾಣುತ್ತಿರುವ ಸಂದರ್ಭದಲ್ಲಿ ತೆರೆಕಾಣುತ್ತಿರುವ ಈ ಸಿನಿಮಾದ ಬಗ್ಗೆ ಚಿತ್ರರಸಿಕರು ಕುತೂಹಲದಿಂದ ಇದ್ದಾರೆ.

ಬಹುಕಾಲದ ನಂತರ ಜೂಹಿ ಚಾವ್ಲಾ ಅಭಿನಯಿಸಿರುವುದು ‘ಪುಷ್ಪಕ’ದ ಮತ್ತೊಂದು ವಿಶೇಷ. ರಚಿತಾ ರಾಮ್ ನಾಯಕಿಯಾಗಿ ನಟಿಸಿರುವ ಚಿತ್ರದಲ್ಲಿ, ಬೇಬಿ ಯುವಿನಾ ಮಗಳ ಪಾತ್ರದಲ್ಲಿ ನಟಿಸಿದ್ದಾಳೆ. ಚರಣ್ ರಾಜ್ ಸಂಗೀತ ಹಾಗೂ ಭುವನ್ ಗೌಡ ಛಾಯಾಗ್ರಹಣ ಚಿತ್ರಕ್ಕಿದೆ. ಅಕ್ಟೋಬರ್ ಕೊನೆಯಲ್ಲಿ ಅಥವಾ ನವೆಂಬರ್ ಆರಂಭದಲ್ಲಿ ‘ಪುಷ್ಪಕ ವಿಮಾನ’ ತೆರೆಕಾಣಲಿದೆ.

■ ರಘು